**ಸಾಕ್ಷಿಯನ್ನು ದಿನಾಂಕ 23-06-2026 ರಂದು ಸತ್ಯಪ್ರಮಾಣ ಭೋಧಿಸಲಾಯಿತು.**
**ಪಾಟಿ ಸವಾಲುಃ ಪ್ರತಿವಾದಿಯ ಪರ ಶ್ರೀ ಎ ಕೆ ಪಿ ವಕೀಲರಿಂದಃ**

1 ನೇ ಪ್ರತಿವಾದಿಯ ನನ್ನ ತಾಯಿಯ ತಂದೆ. ದಾವಾದಲ್ಲಿ ತೋರಿಸಿದ ಆಸ್ತಿಗಳ ದಾಖಲೆಗಳನ್ನು ನಾನು ನೋಡಿದ್ದೇನೆ. ದಾವಾ ಆಸ್ತಿಗಳೆಲ್ಲವೂ ಬಸಲಿಂಗಪ್ಪನ ಸ್ವಂತ ಆಸ್ತಿಗಳು ಎಂದರೆ ಸರಿ. ಬಸಲಿಂಗಪ್ಪ ಕುಂಬಾರ್ ಜೀವಂತ ಇದ್ದಾಗ ನನ್ನ ತಂದೆಯ ಮೊದಲನೇ ಹೆಂಡತಿಗೆ ಭಾಗದ ಆಸ್ತಿಯನ್ನು ಕೊಟ್ಟಿದ್ದರು ಎನ್ನುವ ಪ್ರಶ್ನೆಗೆ ಸಾಕ್ಷಿಯು ಆ ದಾಖಲೆಗಳನ್ನು ಅವರೇ ಒಳಗೊಳಗೆ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನನ್ನ ತಂದೆಯ ಮೊದಲನೇ ಹೆಂಡತಿ ನನ್ನ ತಾಯಿಯ ಖಾಸಾ ಅಕ್ಕನಿರುತ್ತಾಳೆ. ನಮ್ಮ ತಾಯಿಯ ಅಣ್ಣತಮ್ಮಂದಿರು ಒಳಗೊಳಗೇ ಅವರ ಹೆಸರಿಗೆ ದಾಖಲೆಗಳನ್ನು ಮಾಡಿಕೊಂಡಿದ್ದಾರೆ. ಅವರು ಒಳಗೊಳಗೇ ದಾಖಲಾತಿಗಳನ್ನು ಮಾಡಿಕೊಂಡಿದ್ದಾರೆ ಎನ್ನುವ ವಿಷಯವನ್ನು ನಮ್ಮ ತಾಯಿ ನಮಗೆ ಹೇಳಿದ್ದರು, ನನಗೆ ವೈಯಕ್ತಿಕವಾಗಿ ಅದರ ಬಗ್ಗೆ ಮಾಹಿತಿ ಇಲ್ಲ. ಆ ವಿಷಯವನ್ನು ನಮ್ಮ ತಾಯಿ 2014 ನೇ ಇಸ್ವಿಯಲ್ಲಿ ಹೇಳಿದ್ದರು. ಆ ರೀತಿ ಒಳಗೊಳಗೆ ಮಾಡಿಕೊಂಡ ದಾಖಲೆಗಳ ಬಗ್ಗೆ ನೀವೇನಾದರೂ ಪ್ರಶ್ನಿಸಿ ರದ್ದುಪಡಿಸುವ ಬಗ್ಗೆ ಅಪೀಲ್ ಮಾಡಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಮ್ಮ ದೊಡ್ಡಮ್ಮನ ಮಗ ಇದ್ದಾನೆ ಎಂದು ನುಡಿಯುತ್ತಾರೆ. ನಮ್ಮ ತಂದೆಯ ಮೊದಲನೇ ಹೆಂಡತಿಯ ಮಗ ಮತ್ತು ನಾವು ಬೇರೆ ಬೇರೆ ಇದ್ದೇವೆ. 2013-14 ರಿಂದ ನಾನು ಬಳ್ಳಾರಿ ಜಿಲ್ಲಾ ಕುರುಗೋಡು ತಾಲೂಕಿನ ಸಿಂಧಗೇರಿ ಗ್ರಾಮದಲ್ಲಿ ನಮ್ಮ ತಂದೆಯ ಜೊತೆಗೆ ಇದ್ದೇನೆ. ಅದಕ್ಕಿಂತ ಮೊದಲು ನಾವು ಗಂಗಾವತಿ ತಾಲುಕಿನ ಡಣಾಪುರ ಗ್ರಾಮದಲ್ಲಿ ವಾಸವಾಗಿದ್ದೆವು ಎಂದು ತೋರಿಸಲು ಯಾವುದೇ ದಾಖಲಾತಿಯನ್ನು ಹಾಜರು ಮಾಡಿಲ್ಲ. ದಾವಾ ಆಸ್ತಿಗಳೆಲ್ಲವೂ ಯಾರ ಯಾರ ಹೆಸರಿನಲ್ಲಿರುತ್ತವೆ ಎನ್ನುವುದು ನನಗೆ ಗೊತ್ತಿಲ್ಲ. 2020-21 ರಲ್ಲಿ 1 ನೇ ಪ್ರತಿವಾದಿ ತೀರಿಕೊಂಡಿರಬಹುದು, ನಿಖರವಾದ ದಿನಾಂಕ ಮತ್ತು ತಿಂಗಳು ಗೊತ್ತಿಲ್ಲ. ನಾನು ಬಸಲಿಂಗಮ್ಮ ಅಂದರೆ ವಾದಿಯ ಮಗ. ನಮ್ಮ ತಂದೆಯ ಮೊದಲನೇ ಹೆಂಡತಿ ಯಾವಾಗ ತೀರಿಕೊಂಡಿದ್ದಾಳೆ ಎನ್ನುವುದು ಗೊತ್ತಿಲ್ಲ. ಅನುಬಂಧ-5 ರಲ್ಲಿ ತೋರಿಸಿದ ಆಸ್ತಿಗಳಲ್ಲಿ ಕೋರ್ಟಿನ ಯಾವುದೇ ಆದೇಶವಿಲ್ಲದೇ ತಿದ್ದುಪಡಿ ಮಾಡಿದ್ದೇವೆ ಎನ್ನುವುದು ಗೊತ್ತಿಲ್ಲ. ಡಾಣಾಪುರ ಗ್ರಾಮದ ಸರ್ವೇ

ನಂಃ 254/*/3 ಕ್ಷೇತ್ರ 26 ಗುಂಟೆ ಯಾರು ಯಾರಿಗೆ ಕೊಟ್ಟಿದ್ದರು ಎನ್ನುವುದು ಗೊತ್ತಿಲ್ಲ ಅದು ನನ್ನ ತಂದೆಯ ಮೊದಲನೇ ಹೆಂಡತಿಯಾದ ಚೆನ್ನಬಸಮ್ಮನ ಹೆಸರಿನಲ್ಲಿ ಇದೆ. ಈ ದಾವೆಗೆ ಮಾಹಿತಿಯನ್ನು ವಾದಿ ಕೊಟ್ಟಿದ್ದಾರೆ. ಆ ಕಾಲಕ್ಕೆ ನಾನು ಡಾಣಾಪುರದಲ್ಲಿ ಇದ್ದೆನು. ಆಗ ನಾನು ಡಾಣಾಪುರದಲ್ಲಿ ಇದ್ದೆನು ಎಂದು ತೋರಿಸಲು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ. ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಭಾಗ ಕೇಳುವ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿಯ ತಂದೆಯಾದ ಬಸಲಿಂಗಪ್ಪನಿಗೆ 4 ಜನ ಗಂಡುಮಕ್ಕಳು ಮತ್ತು ಇಬ್ಬರು ಹೆಣ್ಣುಮಕ್ಕಳು ಅವರೆಂದರೆ ಚೆನ್ನಬಸಪ್ಪ, ವಿರುಪಾಕ್ಷಪ್ಪ, ನಿಂಗಪ್ಪ ಮತ್ತು ಪಂಪಾಪತಿ ಹಾಗೂ ನಮ್ಮ ತಾಯಿಯ ಅಕ್ಕನಾದ ಚೆನ್ನಬಸಮ್ಮ ಮತ್ತು ನಮ್ಮ ತಾಯಿ ಬಸಲಿಂಗಮ್ಮ. ನಮ್ಮ ತಂದೆಯ ಹೆಸರು ದೊಡ್ಡಬಸಪ್ಪ, ಆತನಿಗೆ ಚೆನ್ನಬಸಮ್ಮ ಮತ್ತು ಬಸಲಿಂಗಮ್ಮ ಎನ್ನುವವರು ಅವರ ಹೆಂಡತಿಯರು. ನಮ್ಮ ಅಜ್ಜ ಬಸಲಿಂಗಪ್ಪ ಜೀವಂತ ಇದ್ದಾಗ 4 ಜನ ಗಂಡುಮಕ್ಕಳಿಗೆ ನೊಂದಾಯಿತ ಪಾಲು ವಿಭಾಗ ಪತ್ರದ ಮೂಲಕ ಆಸ್ತಿಗಳನ್ನು ಹಂಚಿಕೊಟ್ಟಿದ್ದಾನೆ ಎಂದರೆ ಸರಿಯಲ್ಲ. ನನಗೆ ಯಾವುದೇ ವಿಷಯ ಗೊತ್ತಿಲ್ಲ, ಆದರೂ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನಮ್ಮ ತಾಯಿಗೆ ಭಾಗ ಕೇಳುವ ಹಕ್ಕು, ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನಾವು ಕೇಳಿದ 1/6 ಅಂಶ ಭಾಗಕ್ಕೆ ದಾವಾದ ಆಸ್ತಿಗಳಿಗೆ ಅರ್ಹರಾಗಿರುವುದಿಲ್ಲ ಎಂದರೆ ಸರಿಯಲ್ಲ. ಈಗ ನಾವೆಲ್ಲರೂ ಒಟ್ಟಾಯೇ ಇದ್ದೇವೆ. ಒಟ್ಟಾಗಿಯೇ ಇದ್ದೇವೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2014 ಕ್ಕಿಂತ ಮುಂಚೆ ನಾವೆಲ್ಲರೂ ಒಟ್ಟಾಯೇ ಇದ್ದೆವು ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2013-14 ಕ್ಕಿಂತ ಮೊದಲು ಡಾಣಾಪುರ ಗ್ರಾಮದಲ್ಲಿ ವೋಟುಗಳನ್ನು ಹಾಕಿಲ್ಲ. ನಾನು ಆಧಾರ್ ಕಾರ್ಡುಗಳನ್ನು ಸಿಂಧಗೇರಿಯಲ್ಲಿ ಮಾಡಿಸಿದ್ದೆನು. ನಾನು ನಮ್ಮ ಅಜ್ಜನ ಮಕ್ಕಳ ಜೊತೆ ಯಾವತ್ತೂ ಕೂಡಿ ಏಕತ್ರಘರಾಣೆಯಲ್ಲಿ ವಾಸವಾಗಿಲ್ಲ ಮತ್ತು ನಾನು ಏಕತ್ರ ಕುಟುಂಬದಲ್ಲಿ ಇದ್ದೆನು ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಾಯಿಯ ತಾಯಿ ನಮ್ಮ ತಾಯಿ ಮತ್ತು ತಂದೆಯನ್ನು ಇಲ್ಲಿಯೇ ಸಿಂಧಗೇರಿಯಿಂದ ಕರೆದುಕೊಂಡು ಬಂದು ತಮ್ಮ ಜೊತೆಯಲ್ಲಿಯೇ ಡಾಣಾಪುರದಲ್ಲಿ ಇಟ್ಟುಕೊಂಡಿದ್ದರು. ನಾನು ಚಿಕ್ಕವನಿದ್ದಾಗಲೇ ಸಿಂಧಗೇರಿಯಿಂದ ಕರೆದುಕೊಂಡು ಬಂದು ನಮ್ಮ ತಾಯಿ, ತಂದೆಯನ್ನು ನಮ್ಮ ಅಜ್ಜಿ ಕರೆದುಕೊಂಡು ಬಂದು ಡಾಣಾಪುರದಲ್ಲಿ ಇಟ್ಟುಕೊಂಡಿದ್ದರು.

ಆ ರೀತಿ ಇಲ್ಲಿಯೇ ಇದ್ದರು ಎಂದು ತೋರಿಸಲು ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ.

**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯು ಹೇಳಿದ್ದನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೆ. ಕೇ. ಸರಿ ಇದೆ, ಎಂದು ಒಪ್ಪಿರುತ್ತಾರೆ.

(ಜಿ. ಬಿ. ಹಳ್ಳಾಕಾಯಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಗಂಗಾವತಿ.